**L.A.C. No.:100/2009**
**PW-4:**

**ದಿನಾಂಕ:19-01-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಕ್ಲೇಮೆಂಟ್ ಸಂ.14, 31, 33 ಮತ್ತು 34 ಪರ ವಕೀಲರಿಂದ-**

ನನ್ನ ತಂದೆ ತೀರಿಕೊಂಡ ನಂತರ ಈ ಕೇಸಿಗೆ ಸೇರ್ಪಟ್ಟಿರುತ್ತೇನೆ ಎಂದರೆ ಸಾಕ್ಷಿಯು ನನ್ನ ತಾಯಿ ಮುನಿನರಸಮ್ಮ ತೀರಿಕೊಂಡ ನಂತರ ಬಂದಿರುತ್ತೇನೆ. ಮುನಿನರಸಮ್ಮನಿಗೆ ನಾಲ್ಕು ಜನ ಮಕ್ಕಳು. ಅವರ ಹೆಸರು ಮುನಿತಿಮ್ಮಯ್ಯ, ಮುನಿರತ್ನಮ್ಮ, ನಾರಾಯಣಸ್ವಾಮಿ ಹಾಗೂ ಶ್ರೀನಿವಾಸ. ವಂಶವೃಕ್ಷವನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಈಗ ನೆನಪಾಗುತ್ತಿಲ್ಲ. ಈ ಕೇಸನ್ನು ಯಾವ ಸಲುವಾಗಿ ರೆಪೆರೆನ್ಸ್ ಕಳುಹಿಸಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರವೆಲ್ಲ ಗೊತ್ತಿರುತ್ತದೆ. ನನಗೆ ಈ ಕೇಸಿನ ಬಗ್ಗೆ ಯಾವುದೇ ಜ್ಞಾನವಿಲ್ಲದಿದ್ದರೂ ಕೂಡ ಹಾಗೂ ನಾನು ವಾರಸುದಾರರಾಗದೇ ಇದ್ದರೂ ಕೂಡ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೆಚ್ಚಿನ ಪರಿಹಾರವನ್ನು ಕೋರಿರುತ್ತೇನೆ, ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರ ಹಾಗೂ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ಸರ್ವೆ ನಂಬರ್ **25/2** ಎಂದು ಬರೆಸಿರುತ್ತೇನೆ. ಸರ್ವೆ ನಂಬರ್ **25/2** ಸ್ವತ್ತಿನ ಮಾಲೀಕರು ಎಂದು ತೋರಿಸಲು ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯವರು ನನ್ನ ತಾಯಿಯ ಮುಖಾಂತರ ನಿ.ಪಿ.1 ಎಂದು ಈಗಾಗಲೇ ಗುರುತಿಸಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಸಹೋದರರ ಪರವಾಗಿ ಕೇಸು ನಡೆಸಲು ಜಿಪಿಎನ್ನು ಕೊಟ್ಟಿರುತ್ತೇನೆ. ನಿವೇಶನವನ್ನು ಕ್ರಯಕ್ಕೆ ಪಡೆದವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ತಪ್ಪು ಸಾಕ್ಷಿಯನ್ನು ನುಡಿದಿರುತ್ತೇನೆ ಎಂದರೆ ಸರಿ ಅಲ್ಲ.

**<u>ಪಾಟೀ ಸವಾಲು ಕ್ಲೇಮೆಂಟ್ ಸಂ.24 ರಿಂದ 29 ಪರ ವಕೀಲರಿಂದಃ-</u>**

ಈ ಕೇಸಿನಲ್ಲಿ ಭೂ ಸ್ವಾಧೀನವಾದ ಸ್ವತ್ತಿನಲ್ಲಿ ಕಂದಾಯ ನಿವೇಶಗಳನ್ನು ಮಾಡಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ವೆಂಕಟರಮಣಪ್ಪ ನನಗೆ ಸಂಬಂಧಿಕರಲ್ಲ. ವೆಂಕಟರಮಣಪ್ಪನವರು ಭೂ ಸ್ವಾಧೀನವಾದ ಸ್ವತ್ತಿನಲ್ಲಿ ನಿವೇಶಗಳನ್ನು ಮಾಡಿ ಹಲವಾರು ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿನಾಂಕ 03-02-1993 ರಂದು ನಿವೇಶನ ಸಂ.80 ನ್ನು ವೈ. ಶಕುಂತಲಾ ಅವರಿಗೆ ವೆಂಕಟರಮಣಪ್ಪ ಅವರು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 25/2 ರಲ್ಲಿ ನಿವೇಶನಗಳನ್ನು ಮಾಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 25/2 ರಲ್ಲಿ ಕಂದಾಯ ನಿವೇಶನಗಳನ್ನು ಮಾಡಿರುವುದರಿಂದ ಸರ್ವೆ ನಂಬರ್ ಹಾಗೆ ಉಳಿದಿದ್ದು ಪರಿಹಾರ ಪಡೆಯಲು ನಿವೇಶನಗಳನ್ನು ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಸರ್ವೆ ನಂಬರ್ 25/2 ನ್ನು ಮಾರಾಟ ಮಾಡಿದ್ದರಿಂದ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿ ಅಲ್ಲ. ಕಾನೂನು ಬದ್ಧವಾಗಿ ನಿವೇಶನಗಳನ್ನು ಖರೀದಿ ಮಾಡಿದವರು ಹಕ್ಕುದಾರರಾಗಿದ್ದಾರೆ ನಾವು ಮಾರಾಟ ಮಾಡಿ ಹಕ್ಕು ಕಳೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ಸ್ವತ್ತನ್ನು ನಾವು ಮಾರಾಟ ಮಾಡಿರುವುದಿಲ್ಲ, ಬೇರೆಯವರು ಅದೇ ಸರ್ವೆ ನಂಬರ್ ನಲ್ಲಿ ನಿವೇಶನ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಮ್ಮದು ಎಷ್ಟು ಸ್ವತ್ತು ಎಂದು ದಾಖಲಾತಿ ಹಾಜರುಪಡಿಸುತ್ತೇನೆ. ನಿವೇಶನ ಮಾರಾಟ ಮಾಡಿರುವ ಬಗ್ಗೆ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

**L.A.C. No.:100/2009**
**PW-4:**

**ಕ್ಲೇಮೆಂಟ್ ಸಂ.2 ಮತ್ತು 3 ಪರ ವಕೀಲರು ಸಮಯ ಕೋರುತ್ತಿದ್ದು, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಶೈಲಾ ಬಿ.ಎಂ.)**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**